

(6ನೇ ಪುಟದಿಂದ)

ಛಾಯಾಗ್ರಾಹಕರಿಗೂ ನೀರಿನದು ಬಿಡದ ನಂಟು. ಬೆಳಕಿನಲ್ಲಿ ನೀರಿನ ಹನಿಗಳಾಟ ಅವರಿಗೆ ಸುಮ್ಮನೆ ಕೂರಲು ಬಿಡುವುದಿಲ್ಲ. ಮಕ್ಕಳ ನೀರಾಟದಲ್ಲಿ ಪುಟಿದು ಬರುವ ಮುತ್ತಿನ ಹನಿಗಳನ್ನು ಸೆರೆ ಹಿಡಿಯುವಾಸೆಗೆ ಕೊನೆ ಮೊದಲಿಲ್ಲ. ಜಲಪಾತಗಳ ಸೊಬಗು ಸೆರೆ ಹಿಡಿಯುವಷ್ಟೇ ಸಂಭ್ರಮ ತುಂತುರುಗಳನ್ನು ಹಿಡಿಯುವಲ್ಲೂ ಇದೆ.

ನೀರಹನಿಗಳ ಹತ್ತಿರದ ಚಿತ್ರಣ ಹೊಸ ವಿನ್ಯಾಸಗಳನ್ನು ಮೂಡಿಸಿ ನಮ್ಮನ್ನು ಅಚ್ಚರಿಗೆ ತಳ್ಳಿಬಿಡುತ್ತದೆ. ಅರೆ.. ಈ ಫೋಟೋ ನಾವೇ ತೆಗೆದದ್ದೇ..! ಎಂದೂ ಅನ್ನಿಸಿಬಿಡುತ್ತದೆ!

ನೀರಿನೊಡನಾಟದಿಂದ ಮಕ್ಕಳಿಗೆ ನೀರಿನ ಅಗಾಧತೆಯ ಹಾಗೂ ಅಪಾಯದ ಅರಿವೂ ಆಗುತ್ತದೆ. ಬೇಸಿಗೆಯ ಧಗೆಯೂ ಕಡಿಮೆಯಾಗುತ್ತದೆ. ನೀರಿನೊಡನೆ ವ್ಯವಹರಿಸುವುದು ಹೇಗೆಂಬ ಪರಿಕಲ್ಪನೆಯನ್ನು ಮಕ್ಕಳಲ್ಲಿ ಬಾಲ್ಯದಲ್ಲೇ ಮೂಡಿಸುವುದು ಒಳ್ಳೆಯದು. ಮಕ್ಕಳ ಸಂಗಡ ನಾವೂ ನೀರಿಗಿಳಿದು ಅವರ ಸಂತೋಷವನ್ನು ಹೆಚ್ಚಿಸುವುದರ ಜತೆಗೆ ನೀರ ಹರಿವಿನ ಅಪಾಯಗಳ ಬಗ್ಗೆ ಅರಿವೂ ಮೂಡಿಸಬೇಕು. ಮಕ್ಕಳೊಂದಿಗೆ ಮಕ್ಕಳಾಗಿ ನೀರಲ್ಲಿ ಆಟವಾಡುವಾಗ ಪಕ್ಕನೆ ನಮ್ಮ ವಯಸ್ಸೂ ಒಂದಿಷ್ಟು ವರ್ಷಗಳ ಕಾಲ ಹಿಂದಕ್ಕೆ ಜಾರಿದ್ದು ಅರಿವೇ ಆಗುವುದಿಲ್ಲ.

